ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 881 [1081]

ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
[ವಿಧಾನ ಸಭೆಯಿಂದ ಚುನಾಯಿತರಾದವರು]

ಉತ್ತರಿಸುವ ದಿನಾಂಕ : 22.12.2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

(ಅ)	ಬೀದರ್ ಜಿಲ್ಲೆಯ ಕುಂಬಾರವಾಡ ಸರ್ವೆ ನಂ.35 ಹಲಗೆ [ಪರಿಶಿಷ್ಟ ಜಾತಿ] ಇನಾಮ್ ಜಮೀನಾಗಿದ್ದು, ಈ ಜಮೀನು ಬೇರೆಯವರಿಗೆ ವರ್ಗಾವಣೆ ಮಾಡಲು ಸಾಧ್ಯವೆ; ಸಾಧ್ಯವಾದ್ದಲ್ಲಿ, ಅದು ಯಾವ ನಿಯಮದಡಿ ನೀಡಲಾಗಿದೆ; [ವಿವರ ನೀಡುವುದು]	ಈ ಜಮೀನು ಬೇರೆಯವರಿಗೆ ಅಂದರೆ ವಾರಸ್ಸು, ಕೌಟುಂಬಿಕ ಹಂಚಿಕೆ, ಸಕ್ಷಮ ಪ್ರಾಧಿಕಾರ, ಮತ್ತು ನ್ಯಾಯಾಲಯಗಳ ಆದೇಶದ ಆಧಾರದ ಮೇರೆಗೆ ಹೊರತುಪಡಿಸಿ ಬೇರೆ ರೀತಿಯ ಮೂಲಕ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ. ಅದರಂತೆ ಬೀದರ್ ತಾಲ್ಲೂಕಿನ ಕುಂಬಾರವಾಡ ಗ್ರಾಮದ ಸ.ನಂ.35ರ ಜಮೀನು ಭೂ ನ್ಯಾಯ ಮಂಡಳಿ, ಬೀದರ್ ರವರ ಆದೇಶ ಸಂಖ್ಯೆ: ಕೆಸಿಐಎ/ಸಿಆರ್ 812/1983-84 ದಿನಾಂಕ: 07.06.1988ರಂತೆ ಕರ್ನಾಟಕ ಹಲವು ಇನಾಂ ರದ್ದತಿ ಕಾಯ್ದೆ, 1977 ಕಲಂ 5(2) ರನ್ವಯ ಗೇಣಿದಾರಿಕೆ ಹಕ್ಕನ್ನು ಪಡೆದಿರುವವರ ಹೆಸರಿನಿಂದ ವರ್ಗಾವಣೆ ಆಗಿರುತ್ತದೆ.
(ಆ)	ಈ ಇನಾಮ್ ಜಮೀನು ಬೇರೆಯವರಿಗೆ ವರ್ಗಾವಣೆಯಾದದ್ದು ಯಾವಾಗ;	ಭೂ ನ್ಯಾಯ ಮಂಡಳಿ, ಬೀದರ್ ರವರ ಆದೇಶ ಸಂಖ್ಯೆ: ಕೆಸಿಐಎ/ಸಿಆರ್ 812/1983-84 ದಿನಾಂಕ: 07.06.1988 ರನ್ವಯ ವರ್ಗಾವಣೆಯಾಗಿರುತ್ತದೆ.
(ಇ)	ಇತ್ತೀಚೆಗೆ ವರ್ಗಾವಣೆ ಈ ವರ್ಷವಾದರೆ ಇದು 1973ರಲ್ಲಿ ವರ್ಗಾವಣೆಯಾದವರ ಹೆಸರು ಪಹಣಿಯಲ್ಲಿ ಬಂದಿರುವುದು ಹೇಗೆ;	ಈ ಜಮೀನಿನ ಗೇಣಿದಾರಿಕೆ ಹಕ್ಕು ಪಡೆದವರ ವಾರಸುದಾರರ ಹೆಸರಿನಿಂದ ವರ್ಗಾವಣೆಯಾಗಿರುವುದು ಕಂಡುಬಂದಿರುತ್ತದೆ.
(ಈ)	ಕಳೆದ ಅಧಿವೇಶನದಲ್ಲಿ ಸರ್ವೆ ನಂ.35ರ ಬಗ್ಗೆ ಪ್ರಸ್ತಾಪಿಸಿದಾಗ ಕಲಬುರಗಿ ವಿಭಾಗಾಧಿಕಾರಿಗಳಿಗೆ 15 ದಿವಸದಲ್ಲಿ ವಿಲೇವಾರಿ ಮಾಡಲು ಆದೇಶಿಸಲಾಗಿದೆ ಎಂದು ಹೇಳಲಾಗಿದ್ದು, ಇಲ್ಲಿಯವರೆಗೆ ಈ ಕಾರ್ಯ ಆಗದೆ ಇರಲು ಕಾರಣವೇನು?	ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ ರವರು ಈ ಕುರಿತು ದಿನಾಂಕ:27.09.2021 ಹಾಗೂ 08.11.2021 ರಂದು ವಿಚಾರಣೆ ನಡೆಸಿದ್ದು, ವಿಚಾರಣೆಯಲ್ಲಿ ಸಲ್ಲಿಸಿದ್ದ ದಾಖಲೆಗಳು ಹಾಗೂ ಹೇಳಿಕೆಗಳ ಆಧಾರದ ಮೇರೆಗೆ, ಬೀದರ್ ತಾಲ್ಲೂಕು, ಕುಂಬಾರವಾಡ ಗ್ರಾಮದ ಸ.ನಂ.35ರ ಒಟ್ಟು 3-32 ಎಕರೆ

		ಜಮೀನು ಶ್ರೀ ಶಂಕರರಾವ ತಂದೆ ಕಲ್ಲಪ್ಪಾ ಫುಲೇಕರ ರವರಿಗೆ ಕರ್ನಾಟಕ ಕೆಲವು ಇನಾಂ ರದ್ದತಿ ಕಾಯ್ದೆ, 1977, ಕಲಂ 5(2)ರನ್ವಯ ಗೇಣಿದಾರಿಕೆ ಹಕ್ಕನ್ನು ಮಂಜೂರು ಮಾಡಲಾಗಿರುತ್ತದೆ. ಮುಂದುವರೆದು, ಸದರಿ ಸ.ನಂ.35/1ರ 1-10 ಎಕರೆ ಪೈಕಿ 1-01 ಎಕರೆ ಮತ್ತು ಸ.ನಂ.35/2ರ 1-10 ಎಕರೆ ಪೈಕಿ 1-04 ಎಕರೆ ಜಮೀನನ್ನು ನಿಯಮಾನುಸಾರವಾಗಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿಸಲಾಗಿದೆ. ಅಲ್ಲದೆ ಸದರಿ ಜಮೀನು ಕರ್ನಾಟಕ ಕೆಲವು ಇನಾಂ ರದ್ದತಿ ಕಾಯ್ದೆ, 1977ರ ಕಲಂ 5(2)ರಡಿ ಶ್ರೀ ಶಂಕರರಾವ ತಂದೆ ಕಲ್ಲಪ್ಪಾ ಫುಲೇಕರ ರವರಿಗೆ ಮಂಜೂರಾಗಿದ್ದು, ಸದರಿ ಜಮೀನು ಹಲಗಿ ಇನಾಂ ಜಮೀನಾಗಿರುತ್ತದೆ. ಅದೇ ರೀತಿ ಮಂಜೂರಾತಿದಾರರು ಕುರುಬ ಜಾತಿಗೆ ಸೇರಿರುತ್ತಾರೆ. ಆದುದರಿಂದ ಸದರಿ ಜಮೀನು ಪಿಟಿಸಿಎಲ್ ಕಾಯ್ದೆಗೆ ಒಳಪಟ್ಟಿರುವುದಿಲ್ಲ.

ಸಂಖ್ಯೆ: ಆರ್‌ಡಿ 35 ಎಲ್‌ಆರ್‌ಎಸ್ 2021

[ಆರ್.ಅಶೋಕ]

ಕಂದಾಯ ಸಚಿವರು.